ಆ) ಬಂಟ್ವಾಳ ತಾಲ್ಲೂಕು ಹಾಗೂ ಮಂಗಳೂರು ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ಅಂಗನವಾಡಿ ಕೇಂದ್ರಗಳನ್ನು ಯಾವಾಗ ಆರಂಭಿಸುವ ಕಾರ್ಯಕ್ರಮವಿದೆಯೇ ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೬ ಬಾಲವಿಕಾಸ ಯೋಜನೆಗಳನ್ನು ಮಂಜೂರು ಮಾಡಲಾಗಿದೆ.

ಆ) ಬಂಟ್ವಾಳ ಮತ್ತು ಮಂಗಳೂರು (ಗ್ರಾಮಾಂತರ) ತಾಲ್ಲೂಕುಗಳಿಗೆ ಐ.ಸಿ.ಡಿ.ಎಸ್. ಯೋಜನೆಯನ್ನು ವಿಸ್ತರಿಸುವ ಕಾರ್ಯಕ್ರಮ ಸದ್ಯಕ್ಕಿಲ್ಲವಾದರೂ ೭ನೇ ಯೋಜನಾ ಅವಧಿಯೊಳಗೆ ಈ ತಾಲ್ಲೂಕುಗಳಿಗೂ ಯೋಜನೆಯನ್ನು ವಿಸ್ತರಿಸಲಾಗುವುದು.

ಹರಪನಹಳ್ಳಿ ತಾಲ್ಲೂಕಿನ ಗ್ರಾಮಗಳಲ್ಲಿ ರಸ್ತೆಗಳ ನಿರ್ಮಾಣದ ಬಗ್ಗೆ,

೧೦೭೩. ಶ್ರೀ ಬಿ. ಹೆಚ್. ಯಂಕನಾಯಕ, (ಹರಪನಹಳ್ಳಿ).—ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹರಪನಹಳ್ಳಿ ತಾಲ್ಲೂಕಿನ ಕಂಬತ್ತ ಹಳ್ಳಿಯಿಂದ ಹಿರೇಮೇಗಳಗೇರಿ ಗ್ರಾಮದವರೆವಿಗೆ ಅಂದರೆ ೧೨ ಕಿ.ಮೀ. ದೂರದ ರಸ್ತೆಯನ್ನು ೧೯೮೫-೮೬ನೇ ಸಾಲಿನ ಆಯವ್ಯಯದಲ್ಲಿ ಸುಮಾರು ೮ ಲಕ್ಷ ರೂಪಾಯಿಗಳನ್ನು ಒದಗಿಸಿರುವುದು ಹಾಗೂ ತೆಲಗಿಯಿಂದ ರಾಗಿಮುಸಲವಾಡವರೆಗಿನ ರಸ್ತೆಗೆ ಸರ್ಕಾರದವರು ಪತಿಯಿಂದ ಸುಮಾರು ೬ ಲಕ್ಷ ರೂಪಾಯಿಗಳನ್ನು ರಸ್ತೆ ದುರಸ್ತಿಗಾಗಿ ಒದಗಿಸಿರುವುದು ನಿಜವೇ,

ಆ) ಹಾಗಿದ್ದಲ್ಲಿ, ಸದರಿ ರಸ್ತೆಗಳನ್ನು ದುರಸ್ತಿಗೊಳಿಸದಿರಲು ಕಾರಣವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಮತ್ತು ಆ).—ಈ ಕೆಲಸಗಳು ೮೫-೮೬ರ ಆಯವ್ಯಯದಲ್ಲಿ ಸೇರಿಲ್ಲ ೮೬-೮೭ರ ಆಯವ್ಯಯದಲ್ಲಿ ೧,೦೦೦ ರೂ.ಗಳ ಅನುದಾನದೊಂದಿಗೆ ಸೇರಿತ್ತು. ಈ ಕೆಲಸಗಳು ೮೬-೮೭ರ ಆಯವ್ಯಯದಲ್ಲಿ ಅನುಕ್ರಮವಾಗಿ ೫ ಲಕ್ಷ ರೂ. ಮತ್ತು ೪ ಲಕ್ಷ ರೂ. ಅಂದಾಜಿನಲ್ಲಿ ಸೇರಿಸಲ್ಪಟ್ಟಿವೆ. ನಿಯಮಗಳನುಸಾರ ಈ ಕೆಲಸಗಳನ್ನು ತೆಗೆದುಕೊಳ್ಳಲಾಗುವುದು.

ಭಾಲ್ಕಿ ತಾಲ್ಲೂಕಿನ ಸಂಯುಗಾವ ಗ್ರಾಮದ ಹತ್ತಿರ ಸೇತುವೆ ಒಡ್ಡು ಕಟ್ಟೆಯನ್ನು ಕಟ್ಟುವ ಬಗ್ಗೆ.

೧೭೫೧. ಶ್ರೀ ಶಿವಕಾಂತಾ ಜೈರಾಜ ಚತರೆ (ಹುಲಸೂರು).—ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೭೨ರಲ್ಲಿ ಲೋಕೋಪಯೋಗಿ ಇಲಾಖೆಯವರು ಬಿದರೆ ಜಿಲ್ಲೆ, ಭಾಲ್ಕಿ ತಾಲ್ಲೂಕು ಸಂಯುಗಾವ ಗ್ರಾಮದ ಹತ್ತಿರ ಸೇತುವೆ ಹೊಡೆದು ಕಟ್ಟೆಯನ್ನು ಕಟ್ಟಿರುವುದು ನಿಜವೆ,

ಆ) ಹಾಗಿದ್ದಲ್ಲಿ. ಆಲ್ಲಿ ಸದರಿ ಸೇತುವೆಗೆ ಸಂಪರ್ಕವಿರುವ ಒಡ್ಡು ಕಟ್ಟೆಯನ್ನು ಕಟ್ಟಲು ಸರ್ಕಾರದವರು ಪರಿಶೀಲಿಸುವರೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಬೀದರ ಜಿಲ್ಲಾ ಭಾಲ್ಕಿ ತಾಲ್ಲೂಕಿನ ಸಂಯುಗಾವ ಹತ್ತಿರದ ಮಾಂಜರಾ ನದಿಗೆ ಅಡ್ಡವಾಗಿ ಕೆಳಮಟ್ಟದ ಸೇತುವೆಯನ್ನು ಲೋಕೋಪಯೋಗಿ ಬೀದರ ವಿಭಾಗದವರಿಂದ ೧೯೭೯ರಲ್ಲಿ ಕಟ್ಟಲಾಗಿದೆ, ಸೇತುವೆಯು ಒಡೆದಿಲ್ಲ. ಹಾಗೂ ಕಟ್ಟೆಯನ್ನು ಕಟ್ಟಿರುವುದಿಲ್ಲ.

ಆ) ಸೇತುವೆಯ ಕೊಳವೆಗಳಿಗೆ ಕದಗಳನ್ನು ಹಾಕುವ ಕೆಲಸವನ್ನು ತೆಗೆದುಕೊಂಡಿಲ್ಲ. ಸೇತುವೆಯ ಕೆಲಸ ಮುಗಿದಿದೆ. ಒಡ್ಡು ಕಟ್ಟೆಯನ್ನು ಕಟ್ಟುವ ವಿಚಾರ ಪರಿಶೀಲಿಸಲಾಗುವುದು.